<u>ಅಸಲು ದಾವಾಃ-</u> 80/2024 ಪಿ.ಡಬ್ಲ್ಯೂಃ- 1

ದಿನಾಂಕಃ 23.07.2026 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿಗಳ ಪರ ಶ್ರೀ.ಬಿ ಎಸ್ ಆರ್ ವಕೀಲರಿಂದ</u>

ದಾವಾ ಸ್ವತ್ತಿನ ವಿಸ್ತೀರ್ಣ ಎಷ್ಟು ಎಂದರೆ 1 ಎಕರೆ 37 ಗುಂಟೆ. ಕರಾಬು ಎಷ್ಟಿದೆ ಎಂದರೆ 5 ಗುಂಟೆ. ಸದರಿ 5 ಗುಂಟೆ ಎ ಕರಾಬಾ ಅಥವಾ ಬಿ ಕರಾಬಾ ಎಂದರೆ ಗೊತ್ತಿಲ್ಲ. ನಮ್ಮ ಆಸ್ತಿಯು 2 ಎಕರೆ 2 ಗುಂಟೆ ಇದೆ ಎಂದು ಹೇಳಿದ್ದು ಅದರ ಚೆಕ್ಕುಬಂಧಿ ಎಂದರೆ ಪೂ- ರಸ್ತೆ, ಪ-ಸಣ್ಣಬಸಪ್ಪ ರವರ ಜಮೀನು, ಉ- ನೀಲಮ್ಮ ರವರ ಜಮೀನು, ದ-ವೀರಭದ್ರಪ್ಪ ರವರ ಜಮೀನು. ನಮಗೆ ಕ್ರಯಕ್ಕೆ ಕೊಟ್ಟ ಮಾಲೀಕರಿಗೂ ಸದರಿ ವೀರಭದ್ರಪ್ಪ ರವರಿಗೆ ಏನು ಸಂಬಂಧ ಎಂದರೆ ಸಹೋದರರು ಎಂದು ನುಡಿಯುತ್ತಾರೆ.

ಪ್ರತಿವಾದಿಗಳು ಜಮೀನ ಸರ್ವೆ ನಂಬರ್ ಹಾಗೂ ವಿಸ್ತೀರ್ಣ ಹೇಳಲು ಆಗುತ್ತದಾ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ಜಮೀನಿನ ಚೆಕ್ಕುಬಂಧಿ ಎಂದರೆ ಪೂರ್ವಕ್ಕೆ ಬಸವಣ್ಣನ ಕೆರೆ, ಪಶ್ಚಿಮಕ್ಕೆ ಸಣ್ಣಬಸಪ್ಪರವರ ಜಮೀನು, ಉತ್ತರಕ್ಕೆ ಗೊತ್ತಿಲ್ಲ, ದಕ್ಷಿಣಕ್ಕೆ ನಮ್ಮ ಜಮೀನು ಎಂದು ನುಡಿಯುತ್ತಾರೆ.

ಸರ್ವೆ ನಂ.23/2 ರ ಜಮೀನು ಪ್ರತಿವಾದಿಗಳಿಗೆ ಸೇರಿದ್ದು ಅದೇ ರೀತಿ ನಮ್ಮ ಜಮೀನು ಸರ್ವೆ ನಂ.23/3 ರಲ್ಲಿ ಬರುತ್ತದೆ ಎಂದರೆ ಸರಿ. ಸರ್ವೆ ನಂ.23/2 ರ ಹಾಗೂ ಸರ್ವೆ ನಂ.23/3 ರ ಜಮೀನುಗಳನ್ನು ಮಾತ್ರ ನಾನು ಹದ್ದುಬಸ್ತು ಮಾಡಿಸಿರುತ್ತೇನೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ